## ತೂಕಕ್ಕೆ ಹಾಕ್ತಾರಾ?

ಎದುರು ಮನೆಯ ಪುಟ್ಟಿ ನಮ್ಮ ಮನೆಯ ನಿತ್ಯದ ಅತಿಥಿ. ಪ್ರತಿ ತಿಂಗಳೂ ದಿನಪತ್ರಿಕೆಗಳನ್ನು ಹಾಗೂ ಹಳೆಯ ಪುಸ್ತಕಗಳನ್ನು ತೂಕಕ್ಕೆ ಹಾಕಿ, ಲೆಕ್ಕ ಹಾಕುವಾಗ ಪುಟ್ಟಿಯೂ ಜೊತೆಗಿರುತ್ತಿದ್ದಳು. ಒಂದು ದಿನ ಅವಳು ನಮ್ಮ ಮನೆಯಲ್ಲಿದ್ದಾಗ ನಾವೆಲ್ಲಾ 'ತುಲಾಭಾರ'ದ ವಿಚಾರವಾಗಿ ಚರ್ಚೆ ಮಾಡ್ತಾ ಇದ್ದೆವು. ಅರವತ್ತು ವರ್ಷ ತುಂಬಿ ನಿವೃತ್ತಿಯ ಅಂಚಲ್ಲಿರುವ ನನಗೆ ತುಲಾಭಾರ ಮಾಡಬೇಕು ಎಂದು ಮನೆಯಲ್ಲಿ ಮಾತಾಡುತ್ತಿದ್ದರು. ಯಾವಾಗ ಮಾಡುವುದು, ಯಾವ ದೇವಸ್ಥಾನ, ನನ್ನ ತೂಕಕ್ಕೆ ಎಷ್ಟು ಅಕ್ಕಿ, ಬೆಲ್ಲ ಆಗಬಹುದು... ಇತ್ಯಾದಿ ವಿಷಯಗಳನ್ನು ಬೆರಗಿನಿಂದ ಕೇಳಿಸಿಕೊಳ್ಳುತ್ತಿದ್ದ ಪುಟ್ಟಿ, 'ಅಜ್ಜ, ನಿಮ್ಮನ್ನೂ ತೂಕಕ್ಕೆ ಹಾಕ್ತಾರಾ?' ಎಂದು ಕೇಳಬೇಕೇ!

**ವಾ. ಮುರಳೀಧರ**





## ಬಕ್ಕ ತಲೆಯ ಪ್ರಯೋಜನ!

ನನ್ನ ಹೆಂಡತಿಗೆ ಜ್ಯೋತಿಷಿಗಳ ಮೇಲೆ ಭಾರೀ ನಂಬಿಕೆ. ಅವತ್ತೊಂದು ದಿನ ಜ್ಯೋತಿಷಿಯೊಬ್ಬ ಟೀವಿಯಲ್ಲಿ ತಲೆಯಲ್ಲಿ ಎರಡು ಸುಳಿಗಳಿದ್ದವರು ಎರಡು ಮದುವೆ ಆಗುತ್ತಾರೆ ಎಂದು ಹೇಳುತ್ತಿದ್ದ. ಅದನ್ನು ನೋಡುತ್ತಿದ್ದ ನನ್ನ ಹೆಂಡತಿ ಕೂಡಲೇ ಎದ್ದು ಬಂದು ಸೋಫಾ ಮೇಲೆ ಕುಳಿತಿದ್ದ ನನ್ನನ್ನು ಬಗ್ಗಿಸಿ ತಲೆ ನೋಡಿದಳು. ನನ್ನ ತಲೆಯಲ್ಲಿ ಎರಡು ಸುಳಿ ಇದ್ದಿದ್ದು ನೆನಪಾಗಿ ಎದೆ ಧಸಕ್ಕೆಂದಿತು. ಮುಂದೇನಾಗುವುದೊ ಎಂದುಕೊಳ್ಳುವಾಗಲೇ ಅವಳು, 'ಮದುವೆಯಾಗಿ 25 ವರ್ಷಗಳಾದರೂ ನಿಮಗೆ ಸುಳಿಯೆಷ್ಟಿದೆ ಎಂದು ನೋಡಲೇ ಇಲ್ಲ. ಛೇ, ಈಗ ಸುಳಿಯಿರುವ ಜಾಗದಲ್ಲೇ ತಲೆ ಬೋಳಾಗಿದೆ' ಎಂದು ಪಶ್ಚಾತ್ತಾಪ ಪಟ್ಟಳು. ನಾನು ನೆಮ್ಮದಿಯ ನಿಟ್ಟುಸಿರು ಬಿಟ್ಟೆ.

**ರಮಣ್ ಶೆಟ್ಟಿ ರೆಂಜಾಳ್**

ಕಲೆ: ಗಣೇಶ ಆಚಾರ್ಯ